## ವಾಚ್‌ಮ್ಯಾನ್‌ನಾ!

ದೇವರು ಪ್ರತ್ಯಕ್ಷರಾಗಿ
ಗುಂಡನಿಗೆ ಕೇಳಿದ: 'ಏನು
ವರ ಬೇಕು ಬೇಡಿಕೋ ಭಕ್ತಾ'.
ಗುಂಡ, 'ಒಂದು ನೌಕರಿ,
ಹಣದಿಂದ ತುಂಬಿರುವ
ಕೋಣೆ, ನೆಮ್ಮದಿಯ
ನಿದ್ದೆ ಮತ್ತು ಸಖೆಯಿಂದ
ಮುಕ್ತಿ'. ದೇವರು 'ತಥಾಸ್ತು'
ಎಂದ. ಮರುಕ್ಷಣ ಗುಂಡ
ವಾಚ್‌ಮನ್ ಸಮವಸ್ತ್ರ
ಧರಿಸಿ, ಎಟಿಎಮ್
ಒಂದರ ಹವಾನಿಯಂತ್ರಿತ
ಕೋಣೆಯೊಳಗಿನ ಕುರ್ಚಿಯಲ್ಲಿ
ಕೂತು ನಿದ್ದೆ ಹೊಡೆಯುತ್ತಿದ್ದ!

**ರಮಣ್ ಶೆಟ್ಟಿ ರೆಂಜಾಳ್**





ಚಿತ್ರಗಳು: ಗಣೇಶ ಆಚಾರ್ಯ

## ಇಬ್ಬಂದಿ ಸಂಕಟ

ಗುಂಡ ರೋಡಿನಲ್ಲಿ ಬೆಂಡೆಕಾಯಿ
ತೊಟ್ಟು ಮುರಿಯುತ್ತ
ಹೊರಟಿದ್ದ. ಅದನ್ನು ಕಂಡ ಅವನ
ಸ್ನೇಹಿತ ಪುಂಡ, 'ಏ ಗುಂಡ,
ಯಾಕೋ ಹೀಗ್ಮಾಡ್ತಿದ್ದೀಯಾ?'
ಅಂತ ಕೇಳಿದ. ಆಗ ಅವನು,
'ಏನ್ಮಾಡಲಿ, ಅಂಗಡಿಯಲ್ಲಿ
ಮುರಿದು ನೋಡಿದರೆ
ಅಂಗಡಿಯವ ಬೈಯ್ತಾನೆ,
ಮುರಿದು ನೋಡದೇ ಕೊಂಡು
ಹೋದರೆ ಗುಂಡಿ ಮನೆಯಲ್ಲಿ
ಯದ್ವಾತದ್ವಾ ಬೈಯ್ತಾಳೆ'
ಎಂದ ಗುಂಡ, ಬೆಂಡೆಕಾಯಿ
ತೊಟ್ಟು ಮುರಿಯುವುದನ್ನೇ
ಮುಂದುವರಿಸಿದ.

**ವಿ. ವಿಜಯೇಂದ್ರ ರಾವ್**